ರಾಜ್ಯದಲ್ಲಿರುವ ನವೋದಯ ಶಾಲೆಗಳ ಸಂಖ್ಯೆ

622 - ಶ್ರೀಮತಿ ದಮಯಂತಿ ಬೋರೆಗೌಡ (ಶ್ರೀರಂಗಪಟ್ಟಣ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾರಂಭಿಸಲಾಗಿರುವ ನವೋದಯ ವಸತಿ ಶಾಲೆಗಳ ಸಂಖ್ಯೆ ಎಷ್ಟು?

ಆ) ಖಾಯಂ ಸಿಬ್ಬಂದಿಯ ಸಂಖ್ಯೆ ಎಷ್ಟು?

ಇ) ಕೇಂದ್ರ ವಸತಿ ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಗೆ ನೀಡಲಾಗುತ್ತಿರುವ ಆಹಾರ ವೆಚ್ಚ ಎಷ್ಟು?

ಈ) ರಾಜ್ಯ ವಸತಿ ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಗೆ ನೀಡಲಾಗುತ್ತಿರುವ ಆಹಾರ ವೆಚ್ಚವೆಷ್ಟು?

ಉ) ರಾಜ್ಯ ಸರ್ಕಾರವು ಆಹಾರ ವೆಚ್ಚಕ್ಕೆ ನೀಡುತ್ತಿರುವ ಅನುದಾನವು ಕೇಂದ್ರ ಸರ್ಕಾರವು ನೀಡುತ್ತಿರುವ ಆಹಾರ ವೆಚ್ಚದ ಅನುದಾನಕ್ಕೆ ಸಮಗೊಳಿಸಲಾಗುವುದೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ಅ) ನಾಲ್ಕು

ಆ) ವಸತಿ ಶಾಲೆ - 21
ವಸತಿ ನಿಲಯ - 12
ಒಟ್ಟು **33**

ಇ) ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ 350.00

ಈ) ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ. 200.00

ಉ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ

ಸಿಂಧನೂರಿನ ಕುಡಿಯುವ ನೀರಿನ ಯೋಜನೆಯ ಪ್ರಗತಿ

524 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿಂಧನೂರಿನ ಕುಡಿಯುವ ನೀರಿನ ಯೋಜನೆ ಯಾವ ಹಂತದಲ್ಲಿದೆ?

ಆ) ಆ ಯೋಜನೆಗೆ ಇಲ್ಲಿಯವರೆಗೆ ವಿಚ್ರ್ಚಾದ ಹಣ ಎಷ್ಟು ಹಾಗೂ ಆ ಯೋಜನೆಯನ್ನು ಸರ್ಕಾರದವರು ಯಾವಾಗ ಪೂರ್ಣಗೊಳಿಸುವರು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಈ ಕೆಲಸವು ಪ್ರಗತಿಯಲ್ಲಿದೆ.

ಬೌದ್ಧಿಕ ಪ್ರಗತಿಯು ಈ ಕೆಳಕಂಡಂತಿದೆ.

1) ಶೇಖರಣಾ ಜಲಾಯನ ನಿರ್ಮಾಣ ಏರಿ ಕೆಲಸಗಳು ಪೂರೈಸುವ ಹಂತದಲ್ಲಿದೆ.

2) 500 ಮಿ.ಮಿ. ವ್ಯಾಸದ ಹಾಗೂ 16.8 ಕಿ.ಮೀ ಪಿ.ಎಸ್.ಸಿ. ಗುರುತ್ವಾಕರ್ಷಕ ಕೊಳವೆ ಮಾರ್ಗ ಈ ಕೆಲಸಕ್ಕಾಗಿ ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಈವರೆವಿಗೂ 250 ಕೊಳವೆಗಳನ್ನು ಪಡೆಯಲಾಗಿದೆ.

3) 3 ಲಕ್ಷ ಗ್ಯಾಲನ್ ಸಾಮರ್ಥ್ಯದ ಜಲಸಂಗ್ರಹಗಾರ ತಳಪಾಯದ ಕೆಲಸವು ಪ್ರಗತಿಯಲ್ಲಿದೆ.